8


# ಯೇಸುವಿನ ಸಭೆ: ನಿರ್ವಹಿಸುವಿಕೆ

ನಿಶ್ಚಿತವಾಗಿ ಸಭೆಯು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ಅನೇಕರಿಗೆ ಆಸಕ್ತಿಯಿಲ್ಲ. ಹೀಗಿದ್ದರೂ, ನಿರ್ವಹಿಸುವಿಕೆಯು (ಆರ್ಗನೈಝೇಶನ್) ಮುಖ್ಯವಾದ ವಿಷಯವಾಗಿದೆ. ಸಭೆಯ ಸಂಘಟನೆಯು ದೇಹದ ಅಸ್ತಿ ಪಂಜರವಾಗಿದೆ. ಅಸ್ತಿಪಂಜರವು ಅಂಕುಡೊಂಕಾಗಿದ್ದರೆ, ಇಡೀ ದೇಹವು ವಿಕಾರಗೊಳ್ಳುವುದು.

## ಯೇಸು, ಶಿರಸ್ಸು

ಹೆಚ್ಚಾದ ಸಭಾಪಂಗಡಗಳಿಗೆ (ಡಿನಾಮಿನೇಶನ್‌ಗಳಿಗೆ) ಭೂಲೋಕದ ಶಿರಸ್ಸುಗಳೂ ಭೂಲೋಕದ ಮುಖ್ಯ ಕೇಂದ್ರಗಳೂ ಇರುವವು. ಆದರೆ ಯೇಸುವಿನ ಸಭೆಗೆ ಒಂದೇ ಒಂದು ಶಿರಸ್ಸು: ಯೇಸುವು ತಾನೇ. ಸಭೆಯ ಕೇಂದ್ರಸ್ಥಾನವು ಪರಲೋಕದಲ್ಲಿ, ಯೇಸುವು ಇರುವಲ್ಲಿ. ದೇವರು "*ಸಮಸ್ತವನ್ನೂ* ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು"[1] (ಎಫೆಸ 1:22; ಕೊಲೊಸ್ಸೆ 1:18 ನೋಡಿರಿ) ಎಂದು ಪೌಲನು ಹೇಳಿದ್ದಾನೆ. "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ *ಎಲ್ಲಾ* ಅಧಿಕಾರವು ನನಗೆ ಕೊಡಲ್ಪಟ್ಟಿದೆ" (ಮತ್ತಾಯ 28:18)[2] ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು.

ಸಭೆಗಾಗಿ ಭೂಲೋಕದ ಶಿರಸ್ಸುಗಳೂ ಕೇಂದ್ರ ಕಛೇರಿಗಳೂ ಬೈಬಲಲ್ಲಿ ಕಂಡು ಬರುವದಿಲ್ಲ. ಹೆಚ್ಚಾದ ಸಭಾಪಂಗಡಗಳ ಸಂಘಟನೆಗಳ ವಿವರವಾದ ಏರ್ಪಾಡುಗಳೂ ಅಲ್ಲಿ ಇರುವದಿಲ್ಲ. ಹೊಸ ಒಡಂಬಡಿಕೆಯ ಸಮಯಗಳಲ್ಲಿ ಸಭೆಗಳಿಗೆ ಸಂಬಂಧಿಸಿದ ಜಿಲ್ಲಾಮಟ್ಟದ, ರಾಷ್ಟ್ರೀಯ ಮಟ್ಟದ ಇಲ್ಲವೇ ಅಂತರ್‌ರಾಷ್ಟ್ರೀಯ ಮಟ್ಟದ ಸಂಸ್ಥೆಗಳು ಇರಲಿಲ್ಲ. ಸ್ಥಳಿಕ ಸಭೆಗಿಂತ - ದೊಡ್ಡದಾದ ಸಂಘಟನೆಯ ರಚನೆಯಿರಲಿಲ್ಲ.




ಮೇಲಿನ ರೇಖಾ ಚಿತ್ರದಲ್ಲಿ "ಯೇಸು, ಶಿರಸ್ಸು" ಎಂಬುದರ ಕೆಳಗೆ ಸ್ಥಳಿಕ ಸಭೆಗಳು (ಸ್ಥ.ಸ.) ಪ್ರತಿನಿಧಿಕರಿಸಲ್ಪಟ್ಟಿವೆ. ರೇಖಾ ಚಿತ್ರದಲ್ಲಿ ಪ್ರತಿ ಸಭೆಯು ಪ್ರತ್ಯೇಕವಾದದ್ದಾಗಿ ಮತ್ತು ಬೇರೆಯವುಗಳಿಂದ ಸ್ವತಂತ್ರವಾದದ್ದಾಗಿ ಚಿತ್ರೀಕರಿಸಲ್ಪಟ್ಟಿದೆ. ಸ್ಥಳಿಕ ಸಭೆಗಳು ಪ್ರೀತಿಯಿಂದ ಒಂದಾಗಿ ಕೂಡಿಸಲ್ಪಟ್ಟಿವೆ. ಅವು ಒಂದಕ್ಕೊಂದು ಸಹಾಯ


ಮಾಡುತ್ತವೆ (ಅಪೊಸ್ತಲರ ಕೃತ್ಯ 11:28-30; ರೋಮಾಪುರ 15:25, 26). ಆದರೆ ಅವುಗಳ ಮಧ್ಯದಲ್ಲಿ ಸಂಘಟನೆಯ ಬಂಧನಗಳಿರುವದಿಲ್ಲ.

ಈ ವ್ಯವಸ್ಥೆಯು ಕೆಲವು ಸಲ "ಸ್ಥಳಿಕ ಸ್ವಾಯತ್ತತೆ" ಎಂದು ಕರೆಯಲ್ಪಟ್ಟಿದೆ. "ಸ್ವಾಯತ್ತತೆಯು," "ಸ್ವಯಂ - ಆಡಳಿತೆ" ಎಂದರ್ಥ ಕೊಡುವ ಸಂಯುಕ್ತ ಗ್ರೀಕ ಪದದಿಂದ ಬರುತ್ತದೆ. ಕರ್ತನ ಸಭೆಯ ಪ್ರತಿಯೊಂದು ಸ್ಥಳಿಕ ಸಭೆಯು ಸಂಪೂರ್ಣವಾಗಿ ಸ್ವಯಂ - ಆಡಳಿತೆಯುಳ್ಳದ್ದಾಗಿದ್ದು, ಯೇಸುವಿಗೆ ಮಾತ್ರವೇ ಅಧೀನವಾಗಿರುತ್ತದೆ.

ಈ ಸರಳವಾದ ವ್ಯವಸ್ಥೆಯು ಇಂದಿನ ಸಂಮಿಶ್ರಿತ ಜಗತ್ತಿನಲ್ಲಿ ಕಾರ್ಯ ಮಾಡುವದಿಲ್ಲ ಎಂದು ಕೆಲವರು ಯೋಚಿಸುತ್ತಾರೆ. ಸಭೆಯ ನಿಯೋಗವನ್ನು ಸಾಧಿಸಲು ಹೆಚ್ಚಾದ ಸಭೆಯ "ಸಂಘಟನೆಯು" ಅವಶ್ಯ ಎಂದು ಒತ್ತಿ ಹೇಳುತ್ತಾರೆ. ಹೀಗಿದ್ದರೂ ಕರ್ತನ ವ್ಯವಸ್ಥೆಯು ಸಾಕಷ್ಟಾಗಿದೆಯೆಂದು ನಾನು ಸಾಕ್ಷಿಕೊಡುತ್ತೇನೆ. ಮಾನವ ನಿರ್ಮಿತ ಯಾವುದೇ ಸಂಸ್ಥೆಯ "ಲಾಭ" ವಿಲ್ಲದೆ ಹತ್ತು ವರ್ಷಗಳವರೆಗೆ ಆಸ್ಟ್ರೇಲಿಯಾದಲ್ಲಿ ಮಿಶನ್ ಸೇವೆಯ ಭಾಗವಾಗಿದ್ದೆನು: ಓಕ್ಲಾಹೋಮಾದ ಮಿಡ್‌ವೆಸ್ಟ ಪಟ್ಟಣದಲ್ಲಿಯ ಈಸ್ಟ ಸೈಡ ಚರ್ಚ್ ಆಫ್ ಕ್ರೈಸ್ತದಿಂದ ನಾನು ಸಹಾಯ ಹೊಂದುತ್ತಿದ್ದೆ. ಕ್ರಿಸ್ತನ ಇತರ ಸಭೆಗಳು ಅಗತ್ಯವಾದ ನಿಧಿಗಳಿಂದ ಸಹಾಯ ಮಾಡಿದವು. ಯಾವುದೇ ಮಿಶನರಿ ಸೊಸೈಟಿಯ ಅಗತ್ಯವಿರಲಿಲ್ಲ.

## ಸ್ಥಳಿಕ ಸಭೆ

ಹೊಸ ಒಡಂಬಡಿಕೆಯಲ್ಲಿ ಸ್ಥಳಿಕ ಸಭೆಯು ಸಭೆಯ ಕೇವಲ ಸಂಘಟನೆಯ ಘಟಿಕವಾಗಿತ್ತು. ಈ ಪಾಠದ ಉಳಿದ ಭಾಗದಲ್ಲಿ ಬೈಬಲ್ ಸಮಯಗಳಲ್ಲಿ ಸ್ಥಳಿಕ ಸಭೆಗಳನ್ನು ಹೇಗೆ ಸಂಘಟಿಸಲ್ಪಟ್ಟಿವೆ ಎಂಬುದರ ಮೇಲೆ ಕೇಂದ್ರೀಕರಿಸೋಣ. ಫಿಲಿಪ್ಪಿಯಲ್ಲಿಯ ಪೂರ್ಣ ಸಂಘಟಿತ ಸಭೆಗೆ[3] ಪೌಲನು ಬರೆದಾಗ ತನ್ನ ಪತ್ರವನ್ನು ಹೀಗೆ ಪ್ರಾರಂಭಿಸಿದನು: "ಕ್ರಿಸ್ತ ಯೇಸುವಿನ ದಾಸರಾದ ಪೌಲ ತಿಮೊಥೆಯರು ಫಿಲಿಪ್ಪಿಯಲ್ಲಿ ಕ್ರಿಸ್ತ ಯೇಸುವಿನ ಮೂಲಕ ಪರಿಶುದ್ಧರೆಲ್ಲರಿಗೂ ಅವರಲ್ಲಿರುವ ಮೇಲ್ವಿಚಾರಕರಿಗೂ[4] ಸಭಾಸೇವಕರಿಗೂ ಬರೆಯುವುದು" (ಫಿಲಿಪ್ಪಿ 1:1). ಈ ವಚನದಲ್ಲಿ ನಾಲ್ಕು ಗುಂಪುಗಳಿವೆ: ಪೌಲ ಮತ್ತು ತಿಮೊಥೆಯರು ಪ್ರಸಂಗಿಗಳು ಇಲ್ಲವೇ ಸುವಾರ್ತಿಕರು. ಅವರು ಫಿಲಿಪ್ಪಿಯಲ್ಲಿಯ "ಪರಿಶುದ್ಧರಿಗೆ" ಬರೆದಿದ್ದಾರೆ. ಈ ಪದವು ಸಾಮಾನ್ಯವಾಗಿ ಸಭೆಯ ಸದಸ್ಯರಿಗೆ ಸಂಬಂಧಿಸಿದೆ.[5] ಪರಿಶುದ್ಧರ ಮಧ್ಯದಲ್ಲಿ ಎರಡು ವಿಶೇಷ ಗುಂಪುಗಳಿದ್ದವು. ಅವುಗಳನ್ನು ಪೌಲನು "ಮೇಲ್ವಿಚಾರಕರು" ಹಾಗೂ "ಸಭಾಸೇವಕರು" ಎಂದು ಕರೆದನು. ಪೂರ್ಣವಾಗಿ ಸಂಘಟಿಸಲ್ಪಟ್ಟ ಸಭೆಯಲ್ಲಿ ಈ ನಾಲ್ಕು ಗುಂಪುಗಳು ಹೇಗೆ ಹೊಂದಿಕೊಂಡಿರುವವು ಎಂಬುದನ್ನು ಇಲ್ಲಿಯ ರೇಖಾ ಚಿತ್ರ ತೋರಿಸುತ್ತದೆ.



**ಮೇಲ್ವಿಚಾರಕರು: ಹಿರಿಯರು**

ಸಭೆಯ ಮೇಲಿನ ನಾಯಕರು "ಹಿರಿಯರು" ಎಂದು ಕರೆಯಲ್ಪಟ್ಟಿದ್ದಾರೆ. ಈ "ಹುದ್ದೆಗೆ"[6] ಇದು ಅತೀ ಸಾಮಾನ್ಯವಾದ ವರ್ಣನೆಯಾಗಿದೆ (ಅಪೊಸ್ತಲರ ಕೃತ್ಯ 11:30; 14:23; 15:2; 20:17). "ಹಿರಿಯನಿಗಾಗಿ" ಗ್ರೀಕ ಪದ *presbuteros* ಅಂದರೆ "ವಯಸ್ಸಾದ ಮನುಷ್ಯ" ಎಂದರ್ಥ.[7] ಆದರೆ ಸಭೆಯ ನಾಯಕರನ್ನು ಕುರಿತು ವಯಸ್ಸಿನ ಮೇಲಿರುವಂತೆಯೇ ಪ್ರೌಢಾವಸ್ಥೆಯ ಮೇಲೆಯೂ ಹೆಚ್ಚು ಒತ್ತು ಇರುವುದು. ಹಿರಿಯರು ಪ್ರೌಢ ತೀರ್ಮಾನಗಳನ್ನು ಮಾಡಲು ಶಕ್ತರಾಗಿರಬೇಕು.

ಹಿರಿಯರು "ಮೇಲ್ವಿಚಾರಕರು" ಎಂದೂ ತಿಳಿಯಲ್ಪಟ್ಟಿದ್ದರು. ಪೌಲನು ತೀತನಿಗೆ ಬರೆದಾಗ ಅವನು "ಸಭೆಯ ಹಿರಿಯ" ಮತ್ತು "ಬಿಶಪ್/ಮೇಲ್ವಿಚಾರಕರು" ಎಂಬ ಪದಗಳು ಅದಲು ಬದಲಾಗಿ ಉಪಯೋಗಿಸುವ ರೀತಿಯಲ್ಲಿ ಉಪಯೋಗಿಸಲ್ಪಟ್ಟಿವೆ:

> ನೀನು ಕ್ರೇತ ದ್ವೀಪದಲ್ಲಿ ಇನ್ನೂ ಕ್ರಮಕ್ಕೆ ಬಾರದಿರುವ ಕಾರ್ಯಗಳನ್ನು ಕ್ರಮಪಡಿಸಿ ಪಟ್ಟಣ ಪಟ್ಟಣಗಳಲ್ಲೂ ಸಭೆಯ ಹಿರಿಯರನ್ನು ನೇಮಿಸಬೇಕೆಂದು ನಾನು ನಿನಗೆ ಅಪ್ಪಣೆಕೊಟ್ಟು ನಿನ್ನನ್ನು ಅಲ್ಲೇ ಬಿಟ್ಟು ಬಂದೆನಲ್ಲಾ. ಸಭೆಯ ಹಿರಿಯನು ನಿಂದಾರಹಿತನೂ ಏಕ ಪತ್ನಿ ಯುಳ್ಳವನೂ ಆಗಿರಬೇಕು; ಅವನ ಮಕ್ಕಳು ಕರ್ತನನ್ನು ನಂಬಿದವರಾಗಿರಬೇಕು; ಅವರು ದುರ್ಮಾರ್ಗಸ್ಥರೆನಿಸಿ ಕೊಂಡವರಾಗಲಿ ಅಧಿಕಾರಕ್ಕೆ ಒಳಗಾಗದವರಾಗಲಿ ಆಗಿರಬಾರದು. ಯಾಕಂದರೆ *ಮೇಲ್ವಿಚಾರಕರು* (KJVಯಲ್ಲಿ "ಬಿಶಪ್" ಎಂದಿದೆ) ದೇವರ ಮನೆವಾರ್ತೆಯವನಾಗಿರುವದರಿಂದ ನಿಂದಾರಹಿತನಾಗಿರಬೇಕು ... (ತೀತ 1:5-7).[8]

"ಬಿಷಪ್" ಎಂಬ ಪರಿಚಿತವಾದ ಪದವು ಎಪಿಸ್ಕೂಪೊಸ ಎಂಬ ಗ್ರೀಕ ಪದದಿಂದ ಬರುತ್ತದೆ. ಈ ಸಂಯುಕ್ತ ಪದದ ಅರ್ಥ (ಆಗಲೇ ಸೂಚಿಸಿದಂತೆ) "ಮೇಲ್ವಿಚಾರಣೆ" ಮಾಡುವವರು ಎಂದಾಗುವುದು. ದೇವರು ಅವರನ್ನು "ಮೇಲ್ವಿಚಾರಕರನ್ನಾಗಿ" ಮಾಡಿದ್ದಾನೆಂದು ಪೌಲನು ಹಿರಿಯರಿಗೆ ಹೇಳಿದನು (ಅಪೊಸ್ತಲರ ಕೃತ್ಯ 20:17, 28). ಪೇತ್ರನು ಹಿರಿಯರಿಗೆ "ಮೇಲ್ವಿಚಾರಣೆ" ಮಾಡಬೇಕೆಂದು ಉಪದೇಶಿಸಿದನು (1 ಪೇತ್ರ 5:1, 2). "ಮೇಲ್ವಿಚಾರಕ" ("ಬಿಷಪ್") ಎಂಬ ಪದವು ಹಿರಿಯರ ಜವಾಬ್ದಾರಿಕೆಯ ವ್ಯಾಪ್ತಿಯನ್ನು ಒತ್ತಿ ಹೇಳುತ್ತದೆ. ಒಂದು ಸ್ಥಳಿಕ ಸಭೆಗೆ ಸಂಬಂಧಿಸಿ ಎಲ್ಲಾ ವಿಷಯಗಳ ಮೇಲ್ವಿಚಾರಣೆ ಮಾಡುವುದು.[9]

ಸಭಾ ಹಿರಿಯರು/ಮೇಲ್ವಿಚಾರಕರು "pastors" ಎಂಬುದಾಗಿಯೂ ಕರೆಯಲ್ಪಟ್ಟಿದ್ದಾರೆ. ಎಫೆಸ 4ರಲ್ಲಿ ಈ ಪದವು ನಾಮಪದ ರೂಪದಲ್ಲಿ ಕಂಡುಬರುತ್ತದೆ: "ಕೆಲವರನ್ನು ಅಪೊಸ್ತಲರನ್ನಾಗಿಯೂ, ಕೆಲವರನ್ನು ಪ್ರವಾದಿಗಳನ್ನಾಗಿಯೂ, ಕೆಲವರನ್ನು ಸುವಾರ್ತಿಕರನ್ನಾಗಿಯೂ, ಕೆಲವರನ್ನು ಸಭಾ *ಪಾಲಕರನ್ನಾಗಿಯೂ* (Pastor), ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ... ಪರಿಶುದ್ಧರನ್ನು ಯೋಗ್ಯ ಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ... (ಎಫೆಸ 4:11, 12).[10] "Pastor" ಎಂಬುದು ಲ್ಯಾಟಿನ್ ಪದವಾಗಿದ್ದು "ಕುರುಬ" (poimen) ಎಂದು ಗ್ರೀಕ ಪದ ಭಾಷಾಂತರಿಸಲು ಉಪಯೋಗಿಸಲ್ಪಟ್ಟಿದೆ. ಈ ಪದದ ಕ್ರಿಯಾಪದ ರೂಪವು ಅಪೊಸ್ತಲರ ಕೃತ್ಯ 20ರಲ್ಲಿ ಕಂಡು ಬರುತ್ತದೆ. ಅಲ್ಲಿ ಸಭಾ ಹಿರಿಯರು/ಮೇಲ್ವಿಚಾರಕರು "ದೇವರ ಸಭೆಯನ್ನು" *ಕಾಯುವವರಾಗಿರಬೇಕೆಂದು* ಹೇಳಲ್ಪಟ್ಟಿದೆ (ವ. 28).[11] 1 ಪೇತ್ರ 5ರಲ್ಲಿಯೂ ಕ್ರಿಯಾಪದ ರೂಪವು ಕಂಡುಬರುತ್ತದೆ. ಅಲ್ಲಿ ಸಭಾಹಿರಿಯರು/ಮೇಲ್ವಿಚಾರಕರು

"ನಿಮ್ಮಲ್ಲಿರುವ ದೇವರ ಮಂದೆಯನ್ನು *ಕಾಯಿರಿ*" ಎಂದು ಹೇಳಲ್ಪಟ್ಟಿದ್ದಾರೆ (ವ. 2).[12] ಅಪೊಸ್ತಲರ ಕೃತ್ಯ 20 ಮತ್ತು 1 ಪೇತ್ರ 5ರಲ್ಲಿ ಮೂರು ಪದಗಳನ್ನು ಬದಲು ರೀತಿಯಲ್ಲಿ ಉಪಯೋಗಿಸುತ್ತವೆ.

ಹಿರಿಯರು = ಮೇಲ್ವಿಚಾರಕರು = ಪಾಸ್ಟರರು/ಕುರುಬರು

"ಪಾಸ್ಟರ್" ಇಲ್ಲವೆ "ಕುರುಬ" ಎಂಬುದು ಸಭಾ ಹಿರಿಯರ ಕೆಲಸದ ವಿವರಣೆಯಾಗಿದೆ. ಪ್ರಾಮಾಣಿಕ ಕುರುಬರು ತಮ್ಮ ಕುರಿಗಳ ಜೋಪಾಸನೆ ಮಾಡುವರು ಮತ್ತು ಕಾಪಾಡುವರು. ಹಾಗೆಯೇ ಹಿರಿಯರು ಸ್ಥಳಿಕ ಸಭೆಯ ಜೋಪಾಸನೆ ಮಾಡಬೇಕು; ಕಾಪಾಡಬೇಕು. ಸಭೆಯ ನಾಯಕರನ್ನು ಕುರುತು ಇಬ್ರಿಯ 13:17 "ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ" ಎಂದು ಹೇಳುತ್ತದೆ. ಇದು ಹಿರಿಯರಿಗಿರುವ ಗಂಭೀರವಾದ ಜವಾಬ್ದಾರಿಕೆಯಾಗಿರುವುದು.

ಇಂದು ಪ್ರಸಂಗಿಗಳು "ಪಾಸ್ಟರ್ಸ್" ಎಂದು ಕರೆಯಲ್ಪಡ್ಡುತ್ತಾರೆ. ಆದರೆ ಹೊಸ ಒಡಂಬಡಿಕೆಯ ಸಮಯದಲ್ಲಿ ಪ್ರಸಂಗಿಯು ಸ್ಥಳಿಕ ಸಭೆಯ "ಪಾಸ್ಟರ್" ಆಗಿರಲಿಲ್ಲ. "ಪಾಸ್ಟರ್ಸ್" ಎಂಬ ಪದವು ಪ್ರಸಂಗಿಗಳಾಗಿದ್ದವರಿಗೆ ಅಲ್ಲ, ಆದರೆ ಹಿರಿಯರಿಗೆ ಸಂಬಂಧಿಸಿತ್ತು.[13]

ಹೊಸ ಒಡಂಬಡಿಕೆಯಲ್ಲಿ ಯಾವುದೇ ಸಮಯದಲ್ಲಿ ಸ್ಥಳಿಕ ಸಭೆಯಲ್ಲಿಯ "ಹಿರಿಯರ" ಬಗ್ಗೆ ನೀವು ಓದುವಾಗ, ಪದವು ಯಾವಾಗಲೂ ಬಹುವಚನದಲ್ಲಿದೆ (ಅಪೊಸ್ತಲರ ಕೃತ್ಯ 11:30; 14:23; 15:2; 16:4; 20:17; 21:18; 1 ತಿಮೊಥೆ 5:17; ತೀತ 1:5; ಯಾಕೋಬ 5:14; 1 ಪೇತ್ರ 5:1). ಕೇವಲ ಒಬ್ಬ ಸಭಾಹಿರಿಯನ (ಇಲ್ಲವೆ ಪಾಸ್ಟರನ) ಮೇಲೆ ಸಭೆಯ ಜವಾಬ್ದಾರಿಕೆ ಇತ್ತೆಂದು ಓದುವದಿಲ್ಲ.

ಕೆಲವು ಧಾರ್ಮಿಕ ಸಂಘಟನೆಯೊಳಗೆ "ಬಿಷಪ್ಸ್" ಇದ್ದಾರೆ. ಅವರು ಅನೇಕ ಸ್ಥಳಿಕ ಸಭೆಗಳನ್ನೊಳಗೊಂಡ ಒಂದು ಕ್ಷೇತ್ರವನ್ನು ನಿಯಂತ್ರಿಸುತ್ತಾರೆ. ಸ್ಥಳಿಕ ಸಭೆಯ ಸ್ವಯಮಾಡಳಿತವನ್ನು ಜ್ಞಾಪಿಸಿಕೊಳ್ಳಿರಿ. ಪರಿಶುದ್ಧ ಗ್ರಂಥದ ಬರೆಹಗಳ ಪ್ರಕಾರ, ಸಭಾ ಹಿರಿಯರ ಒಂದು ಗುಂಪು ತಾವು ಸದಸ್ಯರಾಗಿರುವ ಸ್ಥಳಿಕ ಸಭೆಯ ಮೇಲೆ ಮಾತ್ರವೇ ಮೇಲ್ವಿಚಾರಣೆ ಮಾಡಬಲ್ಲರು. "*ನಿಮ್ಮಲ್ಲಿರುವ* (ನಿಮ್ಮ ಮಧ್ಯದಲ್ಲಿರುವ) ದೇವರ ಮಂದೆಯನ್ನು ಕಾಯಿರಿ" (1 ಪೇತ್ರ 5:12)[14] ಎಂದು ಪೇತ್ರನು ಹಿರಿಯರಿಗೆ ಹೇಳಿದನು. "ನೂರು ಮೈಲು ಸುತ್ತಳತೆಯಲ್ಲಿಯ ಎಲ್ಲಾ ಮಂದೆಗಳನ್ನು" ಎಂದು ಹೇಳಲಿಲ್ಲ.

ಹಿರಿಯರ/ಮೇಲ್ವಿಚಾರಕರ/ಪಾಸ್ಟರರ ಅರ್ಹತೆಗಳು 1 ತಿಮೊಥೆ 3:1-7 ಮತ್ತು ತೀತ 1:5-9ರಲ್ಲಿ ಕೊಡಲ್ಪಟ್ಟಿವೆ. ಈ ವಚನಗಳನ್ನು ಓದಲು ಕೆಲವು ನಿಮಿಷಗಳನ್ನು ತೆಗೆದು ಕೊಳ್ಳಿರಿ. ಅರ್ಹತೆಗಳ ಪ್ರಕಾರವಾಗಿ ಕೆಲವು ಭಕ್ತಿಯುಳ್ಳ ಕ್ರೈಸ್ತ ಗಂಡಂದಿರೂ ತಂದೆಗಳೂ ಮಾತ್ರವೇ ಹಿರಿಯರಾಗಿ ಸೇವೆ ಮಾಡಬಹುದು. ಮದುವೆಯಾಗದ ಪುರುಷರು ಅರ್ಹರಾಗುವದಿಲ್ಲ; ಮಹಿಳೆಯರು ಅರ್ಹರಾಗಿರುವದಿಲ್ಲ. ಆತ್ಮಿಕ ಪ್ರೌಢತೆ ಮತ್ತು ಒಳ್ಳೇ ನ್ಯಾಯತೀರ್ಪು ಇಲ್ಲದ ಪುರುಷರು ಅರ್ಹರಾಗಿರುವದಿಲ್ಲ.

ಪ್ರತಿಯೊಂದು ಸ್ಥಳಿಕ ಸಭೆಗೆ ತನ್ನ ಸ್ವಂತ ಹಿರಿಯರನ್ನು ಆಯ್ದುಕೊಳ್ಳುವ ಜವಾಬ್ದಾರಿಕೆಯಿರುವುದು. ಪ್ರೇರೇಪಿತ ಅರ್ಹತೆಯ ಮೇಲೆ ಅವಲಂಭಿಸಿ ಅವರು ತಮ್ಮ ಆಯ್ಕೆಗಳನ್ನು ಮಾಡಬೇಕು.[15]

**ಸೇವಕರು: ಡೀಕನರು**

ಫಿಲಿಪ್ಪಿ 1:1ರಲ್ಲಿ ಪೌಲನು "ಮೇಲ್ವಿಚಾರಕರು ಮತ್ತು *ಸಭಾಸೇವಕರು (ಡೀಕನರು)*" ಎಂದು ಹೇಳಿದ್ದಾನೆ.[16] "ಡೀಕನ್" ಎಂಬುದು "ಸೇವಕ" ಎಂದರ್ಥ ಕೊಡುವ ಗ್ರೀಕ ಪದದ ಇಂಗ್ಲೀಷ್ ರೂಪವಾಗಿದೆ.

ಡೀಕನರು = ಸೇವಕರು

ಡೀಕನರನ್ನು "ಹಿರಿಯರ ಬಲಗೈ ಜನರು" ಎಂದು ತಿಳಿಯಬಹುದು. ನಾಯಕರು ತಾವು ಮಾಡಬೇಕೆಂದು ಬಯಸಿದ ದೇವರ ಕಾರ್ಯಕ್ಕೆ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿ ಕೊಳ್ಳಲಕ್ಕಾಗುವಂತೆ ಸ್ಥಳಿಕ ಸಭೆಯ ಅವಶ್ಯಕತೆಗಳ ಬಗ್ಗೆ ಗಮನಕೊಡಲು "ಡೀಕನರನ್ನು" ನೇಮಿಸಿದರು (ಅಪೊಸ್ತಲರ ಕೃತ್ಯ 6:1-6 ನೋಡಿರಿ).[17]

ಡೀಕನರಿಗೆ ಸ್ವಂತವಾದ ಅಧಿಕಾರವಿರಲಿಲ್ಲ.[18] ಅವರಿಗಿದ್ದ ಕೇವಲ ಅಧಿಕಾರವು ಅವರು ತಮ್ಮ ಜವಾಬ್ದಾರಿಕೆಗಳನ್ನು ಕೈಕೊಳ್ಳುವಂತೆ ಹಿರಿಯರು ಅವರಿಗೆ ವಹಿಸಿಕೊಳ್ಳ ಬೇಕಾಗಿತ್ತು.

ಡೀಕನರ ಅರ್ಹತೆಗಳು 1 ತಿಮೊಥೆ 3:8-13ರಲ್ಲಿ ಕಂಡುಬರುತ್ತದೆ. ಆ ಅರ್ಹತೆ ಗಳನ್ನು ಅವಲಂಭಿಸಿ ಡೀಕನರನ್ನು ಆಯ್ಕೆ ಮಾಡಿಕೊಳ್ಳುವ ಜವಾಬ್ದಾರಿಕೆ ಸಭೆಗಿತ್ತು (ಅಪೊಸ್ತಲರ ಕೃತ್ಯ 6:3, 5 ನೋಡಿರಿ).

**ಪ್ರಸಂಗಿಗಳು: ಸುವಾರ್ತಿಕರು**

ಆದಿ ಸಭೆಯಲ್ಲಿ ಪ್ರಸಂಗಿಗಳಿಗೆ ಮೂರು ಹೆಸರುಗಳಿದ್ದವು. ಮೊದಲು ಅವರು "ಪ್ರಸಂಗಿಗಳು" ಎಂದು (ರೋಮಾಪುರ 10:14; 1 ತಿಮೊಥೆ 2:7; 2 ತಿಮೊಥೆ 1:11) ಇಲ್ಲವೇ "ಪ್ರಸಂಗಿಸಿದವರು" ಎಂದು (1 ಕೊರಿಂಥ 1:23) ಕರೆಯಲ್ಪಟ್ಟರು. "ಪ್ರಸಂಗಿ" ಎಂಬುದಕ್ಕೆ ಗ್ರೀಕ ಪದವು "herald" (ದೂತ, ಸಾರುವನು) ಎಂಬುದಾಗಿರುವ ಪದವಾ ಗಿತ್ತು. ಆದುದರಿಂದ, ಪ್ರಸಂಗಿಗಳು ಅರಸ ಯೇಸುವಿಗಾಗಿ ದೂತರಾಗಿದ್ದರು.[19]

ಕೆಲವು ಸಲ ಪ್ರಸಂಗಿಗಳು "ಮಿನಿಸ್ಟರ್ಸ್" (ಸೇವಕ) ಎಂದು (ಅಪೊಸ್ತಲರ ಕೃತ್ಯ 26:16; ರೋಮಾಪುರ 15:16; ಎಫೆಸ 3:7; 6:21) ಇಲ್ಲವೇ "ಸೇವೆಯುಳ್ಳವ." (ಸುವಾರ್ತಿಕ) (ಅಪೊಸ್ತಲರ ಕೃತ್ಯ 6:4; 2 ತಿಮೊಥೆ 4:5) ಎಂದು ಕರೆಯಲ್ಲಟ್ಟರು. "ಮಿನಿಸ್ಟರ್" ಎಂಬ ಪದವು "ಡೀಕನ್" ಎಂಬ ಅದೇ ಗ್ರೀಕ ಪದದ ಭಾಷಾಂತರವಾ ಗಿದೆ ಮತ್ತು "ಸೇವಕ" ಎಂದರ್ಥ ಕೊಡುತ್ತದೆ. ಪ್ರತಿಯೊಬ್ಬ ಕ್ರೈಸ್ತನು ಮಿನಿಸ್ಟರ್/ಸೇವಕ ಆಗಿರುವನು (ಆಗಿರತಕ್ಕದ್ದು); ಅಂದರೆ ಪ್ರತಿಯೊಬ್ಬ ಕ್ರೈಸ್ತನಿಗೆ ಸೇವೆಯಿರತಕ್ಕದ್ದು ಇಲ್ಲವೇ ಸೇವೆಯ ಕ್ಷೇತ್ರವಿರತಕ್ಕದ್ದು (ಎಫೆಸ 4:12; ಇಬ್ರಿಯ 6:10; 1 ಪೇತ್ರ 4:10, 11). ಆದುದರಿಂದ ಪ್ರಸಂಗಿಯು ಸ್ಥಳಿಕ ಸಭೆಯ "ಸೇವಕನಾಗಿರುವದಿಲ್ಲ." "ಸೇವಕ" ಎಂಬ ಮಾತು ಪ್ರಸಂಗಿಗೆ ಅನ್ವಯಿಸಲ್ಪಟ್ಟಾಗ "ಅವನು ವಾಕ್ಯದ ಸೇವಕನು" (ಅಪೊಸ್ತ ಲರ ಕೃತ್ಯ 6:4 ನೋಡಿರಿ) ಇಲ್ಲವೇ "ಅವನ ಸೇವೆಯು ಪ್ರಸಂಗಿಸುವುದು" ಎಂಬ ಮಾತುಗಳನ್ನು ಮಿತಿಗೊಳುಸುವುದು ಒಳ್ಳೆಯದು.

ಹೊಸ ಒಡಂಬಡಿಕೆಯಲ್ಲಿ ಪ್ರಸಂಗಿಯನ್ನು ವಿವರಿಸಿದ ಹೆಸರು "ಸುವಾರ್ತಿಕ" ಎಂಬುದು (ಅಪೊಸ್ತಲರ ಕೃತ್ಯ 21:8; ಎಫೆಸ 4:11; 2 ತಿಮೊಥೆ 4:5).[20] ಸುವಾರ್ತಿಕ ಎಂಬ ಪದವು "ಸುವಾರ್ತೆ"ಗಾಗಿದ್ದ ಪದದಿಂದ ಬಂದಿದೆ. "(ಯೇಸುವಿನ ಬಗ್ಗೆ) ಶುಭ ವಾರ್ತೆಯನ್ನು ಸಾರುವವನು" ಎಂದರ್ಥವಾಗುವುದು.[21]

ಇಂದು, ಪ್ರಸಂಗಿಗಳ ಜವಾಬ್ದಾರಿಕೆಯು ದೇವರ ವಾಕ್ಯವನ್ನು ಪ್ರಸಂಗಿಸುವುದೂ ಬೋಧಿಸುವುದೂ ಆಗಿದೆ. ದೇವರ ಸಂದೇಶವನ್ನು ಪ್ರಸಂಗಿಸುವದನ್ನು ದಾಟಿ ಅವರಿಗೆ ಯಾವುದೇ ಅಧಿಕಾರವಿರುವದಿಲ್ಲ.[22]

ಜನರು ಪ್ರಸಂಗಿಗಳನ್ನು ದೇವರು ಅವರಿಗೆ ಕೊಟ್ಟ ಸ್ಥಾನಕ್ಕಿಂತ ಹೆಚ್ಚಾಗಿ ಮೇಲಕ್ಕೇರಿಸಿದ್ದರು. ಪರಿಶುದ್ಧ ಗ್ರಂಥದ ಬರಹಗಳಿಗೆ ಅನುಸಾರವಾಗಿರದ ಹೆಸರುಗಳನ್ನು ಅವರಿಗೆ ಕೊಟ್ಟರು (ಮತ್ತಾಯ 23:9 ನೋಡಿರಿ). ಅವುಗಳಲ್ಲಿ ಒಂದು "ರೆವರಂಡ್" ಎನ್ನುವ ವಿಶೇಷಣ. ಈ ಪದದ ಅರ್ಥ "ಸನ್ಮಾನಕ್ಕೆ ಯೋಗ್ಯನು" ಎಂಬುದು.[23] ಈ ಮಾತು KJVಯಲ್ಲಿ ಒಂದು ಸಲ[24] ಕೀರ್ತನೆಯಲ್ಲಿ 111:9ರಲ್ಲಿ ಕಂಡು ಬರುತ್ತದೆ. ದೇವರ ಬಗ್ಗೆ ಮಾತನಾಡುವಾಗ ಕೀರ್ತನೆಯು " … ಆತನ ನಾಮವು ಪರಿಶದ್ಧವೂ ಭಯಂಕರವೂ ಆಗಿದೆ" ಎಂದು ಹೇಳುತ್ತದೆ. ದೇವರ ನಾಮವು ಮಾತ್ರವೆ ಸನ್ಮಾನಕ್ಕೆ ಯೋಗ್ಯವಾದದ್ದು. ನಾನು ದೇವರಾಗಿರದೇ ಇರುವದರಿಂದ "ರೆವರಂಡ್" ಎಂಬ ಶಿರೋನಾಮ ಧರಿಸುವುದಿಲ್ಲ.

**ಪರಿಶುದ್ಧರು: ಇತರ ಸದಸ್ಯರು**

ಸ್ಥಳಿಕ ಸಭೆಗೆ ಇತರ ಮಹತ್ವದ ಕಾರ್ಯಗಳೂ ವಿಶೇಷ ಚಟುವಟಿಕೆಗಳೂ ಇರುವವು. ಉದಾಹರಣೆಯಾಗಿ ವಾಕ್ಯವನ್ನು ಬಹಿರಂಗವಾಗಿ ಕಲಿಸುವವರಾಗಿದ್ದೇವೆ (ಎಫೆಸ 4:11 ನೋಡಿರಿ). ಸಭೆಯ ಎಲ್ಲಾ ಸದಸ್ಯರನ್ನು ಒಳಗೊಂಡಿರುವಂತೆ ಫಿಲಿಪ್ಪಿ 1:1ರಲ್ಲಿ ಕಂಡು ಬರುವಂಥ "ಪರಿಶುದ್ಧರು" ಎಂಬ ಮಾತನ್ನು ಉಪಯೋಗಿಸಿರುತ್ತಾನೆ. ಪ್ರತಿಯೊಬ್ಬ ಸದಸ್ಯನು ಹಿರಿಯರ ಕೆಳಗಿದ್ದು ಅವರಿಗೆ ಒಳಪಟ್ಟವನಾಗಿರಬೇಕು.[25] "ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವುದು ನಿಮಗೆ ಪ್ರಯೋಜನಕರವಾದದ್ದಲ್ಲ" ಎಂದು ಇಬ್ರಿಯ 13:17 ಹೇಳುತ್ತದೆ.

## ಮುಕ್ತಾಯ

ನೀವು ಎಲ್ಲಿ ಆರಾಧಿಸುವಿರಿ ಮತ್ತು ಸೇವೆ ಮಾಡುವಿರಿ ಎಂದು ನೀವು ಯೋಚಿಸುವಾಗ, ಈ ರೀತಿಯ ಪ್ರಶ್ನೆಗಳನ್ನು ನೀವು ಕೇಳಿಕೊಳ್ಳಬೇಕು: "ಈ ಸಭೆಯು ಸ್ವತಂತ್ರವಾಗಿದೆಯೇ ಇಲ್ಲವೇ ಯಾವುದೇ ಮಾನವ ಅಧಿಕಾರಿಗೆ ಇಲ್ಲವೇ ಸಂಸ್ಥೆಗೆ ಉತ್ತರ ಕೊಡಬೇಕಾಗಿದೆಯೇ?"; "ಪ್ರಸಂಗಿಯು" ಸಭೆಯ "ಪಾಸ್ಟರ್" ಎಂದು ಕರೆಯಲ್ಪಡುವನೋ?; "ಅವನು 'ರೆವರಂಡ್' ಎಂಬ ಸತ್ಯವೇದಕ್ಕೆ ಅನುಗುಣವಾಗಿರದ ಶಿರೋನಾಮೆಯನ್ನು ಧರಿಸುವನೋ?"

ಸಭೆಯ ನಿರ್ವಹಿಸುವಿಕೆಯು ಮುಖ್ಯವಾದದ್ದು. ಅದು ದೇವರ ಯೋಜನೆಗೆ ಅನುಗುಣವಾದದ್ದಾಗಿರಬೇಕು.

ಟಿಪ್ಪಣಿಗಳು

[1]ಸ್ಪಷ್ಟನೆ ನನ್ನದು. [2]ಸ್ಪಷ್ಟನೆ ನನ್ನದು. [3]ಈ ಪಾಠದಲ್ಲಿ, ಅನಂತರದಲ್ಲಿ ಸಭೆಯ ನಾಯಕರಿಗೆ ದೇವರು ಕೊಟ್ಟ ಕೆಲವು ಅರ್ಹತೆಗಳು ಇರಬೇಕು ಎಂದು ನೋಡುತ್ತೇವೆ. ಲಭ್ಯವಿದ್ದ ಜನರಿಗೆ ಆ ಅರ್ಹತೆಗಳು ಇಲ್ಲದಿದ್ದರೆ ನಾಯಕರಾಗಿ ನೇಮಿಸಲ್ಪಡಬಾರದು. ಹೀಗಿರುವಾಗ ಸ್ಥಳಿಕ ಸಭೆಯಾಗಿ ಈ ವಿಷಯದಲ್ಲಿ ಕೊರತೆಯುಳ್ಳದ್ದಾಗಿರುವುದು (ತೀತ 1:5 ನೋಡಿರಿ). ಪೇತ್ರ ಅರ್ಹತೆಯನ್ನು ಹೊಂದುವಂತೆ ಜನರನ್ನು ಸಭೆಗಳು ಸತತವಾಗಿ ಬೆಳೆಸಬೇಕು. [4]ಇಲ್ಲಿ KJVಯಲ್ಲಿ "ಬಿಷಪ್‌ರು" ಎಂದಿದೆ. ನಾವು ನೋಡುವಂತೆ "ಬಿಷಪ್‌ರು" ಎಂಬ ಪದದ ಅಕ್ಷರಶಃ ಅರ್ಥ "ಸಭಾಧ್ಯಕ್ಷನು" ಎಂದಾಗುತ್ತದೆ. [5]"ಯೇಸುವಿನ ಸಭೆ: ವರ್ಣನೆ" ಎಂಬ ಪಾಠ ಪುನರಾವರ್ತಿಸಿರಿ. [6]"Office" ಎಂಬ ಪದವನ್ನು ನಾನು ಉಲ್ಲೇಖ ಚಿನ್ಹೆಗಳೊಳಗೆ ಹಾಕುತ್ತೇನೆ. ಯಾಕಂದರೆ ಅದು ಒಂದು ಹುದ್ದೆಯಲ್ಲ. ಆದರೆ ಒಂದು ಕೆಲಸವಾಗಿದೆ ಎಂದು ಒತ್ತಿ ಹೇಳ ಬಯಸುತ್ತೇನೆ. ಹಿರಿಯತನವು ಜವಾಬ್ದಾರಿಕೆಯಷ್ಟು ಒಂದು ಸ್ಥಾನವಾಗಿರುವುದಿಲ್ಲ. [7]ಸಭೆಯ ನಾಯಕರಿಗಾಗಿ ("ಹಿರಿಯರು" ಮತ್ತು "ಡೀಕನರು" ಇತ್ಯಾದಿ) ಉಪಯೋಗಿಸಿದ ಪದಗಳು ಆ ದಿನದ ಸಾಮಾನ್ಯ ಶಬ್ದಕೋಶದ ಭಾಗವಾಗಿದ್ದವು. ಇವುಗಳಲ್ಲಿ ಪ್ರತಿಯೊಂದು ಶಬ್ದವು ಹೊಸ ಒಡಂಬಡಿಕೆಯಲ್ಲಿ ಸಾಮಾನ್ಯ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಪದವು ಸಾಮಾನ್ಯ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆಯೇ ಇಲ್ಲವೇ ಸಭಾನಾಯಕರ ವಿಶೇಷ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿತೋ ಎಂಬುದು ಸಂದರ್ಭದ ಹಿನ್ನೆಲೆಯಲ್ಲಿ ಅರ್ಥವಾಗುವುದು. [8]ಸ್ಪಷ್ಟನೆ ನನ್ನದು. [9]ಸಭಾ ಹಿರಿಯರಿಗೆ ಆತ್ಮಿಕ ವಿಷಯಗಳ ಮೇಲೆ ವಿಚಾರಣೆ ಹಾಗೂ ಡೀಕನರಿಗೆ ಪ್ರಾಪಂಚಿಕ ವಿಷಯಗಳ ಮೇಲೆ ವಿಚಾರಣೆ ಎಂದು ಕೆಲವು ಸಲ ಹೇಳಲ್ಪಟ್ಟಿದೆ. ಇದು ಸತ್ಯವಾದದ್ದಲ್ಲ. ಡೀಕನರು ಯಾವುದೇ ಇಲ್ಲವೇ ಎಲ್ಲಾ ಶಾರೀರಕ ಅವಶ್ಯಕತೆಗಳ ಜವಾಬ್ದಾರಿಕೆ ತೆಗೆದು ಕೊಳ್ಳುವಂತೆ ಹಿರಿಯರು ಡೀಕನರಿಗೆ ವಹಿಸಿ ಕೊಡಬಹುದು. ಆದರೆ ಸಭೆಯ ಮೇಲೆ ಪರಿಣಾಮ ಮಾಡುವ ಪ್ರತಿಯೊಂದು ವಿಷಯದ ಜವಾಬ್ದಾರಿಕೆಯು ಇನ್ನೂ ಹಿರಿಯರ ಮೇಲಿತ್ತು. [10]ಸ್ಪಷ್ಟನೆ ನನ್ನದು.

[11]ಸ್ಪಷ್ಟನೆ ನನ್ನದು. [12]ಸ್ಪಷ್ಟನೆ ನನ್ನದು. [13]ಒಬ್ಬ ಪ್ರಸಂಗಿಗೆ ಹಿರಿಯನ ಅರ್ಹತೆಗಳಿದ್ದು ಸಭೆಯು ಅವನನ್ನು ಆ ಹುದ್ದೆಯಲ್ಲಿ ಸೇವೆ ಮಾಡಬೇಕೆಂದು ಅವನನ್ನು ಕೇಳಿಕೊಂಡರೆ ಅವನು ಹಿರಿಯರಲ್ಲಿ/ಮೇಲ್ವಿಚಾರಕರಲ್ಲಿ/ಪಾಸ್ಟರರಲ್ಲಿ ಒಬ್ಬನಾಗಹುದು. ಆದರೆ ಅವನು ಸತ್ಯವೇದಕ್ಕನು ಗುಣವಾಗಿ ಎಂದೂ "ಪಾಸ್ಟರ್" ನಾಗಲಾರನು. [14]ಸ್ಪಷ್ಟನೆ ನನ್ನದು. [15]ನೇಮಿಸಲ್ಪಟ್ಟ ಅರ್ಹತೆಗಳ ಮೇಲಿಂದ ನಾಯಕರನ್ನು ಒಂದು ಸ್ಥಳಿಕ ಸಭೆಯು ಆಯ್ಕೆ ಮಾಡುವ ಉದಾಹರಣೆಗಾಗಿ ಅಪೊಸ್ತಲರ ಕೃತ್ಯ 6:3, 5 ನೋಡಿರಿ. [16]ಸ್ಪಷ್ಟನೆ ನನ್ನದು. [17]"ಡೀಕನ್ಸ್" ಎಂಬ ಪದವನ್ನು ಉಲ್ಲೇಖ ಚಿನ್ಹೆಗಳಲ್ಲಿ ಇಟ್ಟಿದ್ದೇನೆ. ಯಾಕಂದರೆ ಈ ಜನರು "ಅಧಿಕೃತವಾಗಿ" ಡೀಕನರೋ ಅಲ್ಲವೋ ಎಂಬುದಕ್ಕಾಗಿ ಪ್ರಶ್ನೆಯಿದೆ. ಆದಾಗ್ಯೂ ಅವರು ಡೀಕನರ ಕೆಲಸ ಮಾಡಿದರು ಹಾಗೂ "ಡೀಕನ್" ಎಂಬ ಪದದಿಂದ ಭಾಷಾಂತರಿಸಿದ ಕ್ರಿಯಾಪದ ರೂಪವು ಅಪೊಸ್ತಲರ ಕೃತ್ಯ 6:2ರಲ್ಲಿ ಉಪಯೋಗಿಸಲ್ಪಟ್ಟಿದೆ. [18]"ಡೀಕನರ ಮಂಡಳಿಯು" ಸಭೆಯನ್ನು ನಡಿಸತಕ್ಕದ್ದು ಎಂದು ಹೊಸ ಒಡಂಬಡಿಕೆಯು ಬೋಧಿಸುವದಿಲ್ಲ. [19]ಪ್ರಸಂಗಿಯು "ಪೂರ್ಣಾವಧಿ ಸೇವಕನು" ಇಲ್ಲವೇ ಅವನು ಬೇರೆ ಕೆಲಸದಲ್ಲಿದ್ದು ಭಾನುವಾರಗಳಲ್ಲಿ ಪ್ರಸಂಗಿಸಿದನೋ ಎಂಬುದು ಭಿನ್ನತೆ ಮಾಡುವದಿಲ್ಲ. ಅವನು ಇನ್ನೂ ಪ್ರಸಂಗಿಯಾಗಿಯೇ ಇರುವನು. [20]"ಇವ್ಯಾಂಜಲಿಸ್ಟ್" ಎಂಬ ಪದವು ಒಬ್ಬನು ಶುದ್ಧ ಸುವಾರ್ತೆಯನ್ನು ಸಾರುತ್ತಾ ಒಂದು ಸ್ಥಳದಲ್ಲಿ ಇದ್ದನೋ ಇಲ್ಲವೇ ಬೇರೆ ಕಡೆಗಳಿಗೆ ಪ್ರಯಾಣ ಮಾಡಿದನೋ ಎಂಬುದಕ್ಕೆ ಸಂಬಂಧವಿರಲಿಲ್ಲ.

[21]"ಸುವಾರ್ತಿಕ" ಎಂಬುದರ ಮೂಲ ಕ್ರಿಯಾಪದ ರೂಪವು ಹೆಚ್ಚಾದ ಸಲ ಹೊಸ ಒಡಂಬಡಿಕೆಯಲ್ಲಿ ಕಂಡುಬರುತ್ತದೆ. ಅಕ್ಷರಶಃವಾಗಿ ಅದರ ಅರ್ಥ ಶುಭ ವಾರ್ತೆಯನ್ನು ಸಾರುವುದು. ಆದರೆ ಅದು ಸಾಮಾನ್ಯವಾಗಿ "ಪ್ರಸಂಗಿಸು" ಎಂದು ಭಾಷಾಂತರಿಸಲ್ಪಡುತ್ತದೆ. (ಅಪೊಸ್ತಲರ ಕೃತ್ಯ 8:35; ರೋಮಾಪುರ 1:15 ನೋಡಿರಿ). [22]"ಸುವಾರ್ತಿಕ ಅಧಿಕಾರ" ಎಂದು ಕರೆಯುತ್ತಿರುವ ಯಾವುದನ್ನೇ ಹೊಸ ಒಡಂಬಡಿಕೆಯು ಬೋಧಿಸುವದಿಲ್ಲ. [23]*The American Heritage Dictionary*, 3d ed., s.v. "reverend." [24]NASB ಪದವನ್ನು "awesome" (ಗಂಭೀರ) ಎಂದು ಭಾಷಾಂತರಿಸಲ್ಪಟ್ಟಿದೆ. RSVಯಲ್ಲಿ "terrible" (ಭಯಂಕರ) ಎಂದಿದೆ. (ಕೆಲವು ಪ್ರಸಂಗಿಗಳು "ಗಂಭೀರ" ಎಂಬುದನ್ನು ಮೆಚ್ಚಿಕೊಳ್ಳುತ್ತಾರೆ. ಆದರೆ ಹೆಚ್ಚಾದವರು "ಭಯಂಕರ" ಎಂಬುದಕ್ಕೆ ಗಮನ ಕೊಡುವದಿಲ್ಲ.) [25]ಅಂದರೆ, ಸ್ಥಳಿಕ ಸಭೆಯ

ಸದಸ್ಯರು ಸಭಾಹಿರಿಯರು ಸಭೆಯನ್ನು ಅಡ್ಡಮಾರ್ಗಕ್ಕೆ ಎಳೆಯದಿರುವವರೆಗೆ ಅವರ ತೀರ್ಪುಗಳನ್ನು ಒಪ್ಪಿಕೊಳ್ಳಬೇಕು (ಅಪೊಸ್ತಲರ ಕೃತ್ಯ 20:28-31).

© 2009 Truth for Today